6. ಗಮನ ಸೆಳೆಯುವ ಸೂಚನೆ

ವಿಷಯ: ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿ ನಿಯಮಿತ, ಬೆಂಗಳೂರು, ಇಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಮಾನ್ಯ ಸಹಕಾರಿ ಸಚಿವರ ಗಮನವನ್ನು ನಾನು ಸೆಳೆಯ ಬಯಸುತ್ತೇನೆ.

+ ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ. ಗಮನ ಸೆಳೆಯುವ ಸೂಚನೆ ಸಂಖ್ಯೆ: 190ರಲ್ಲಿ ಕೇಳಿರುವಂತೆ ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿ ನಿಯಮಿತ, ಬೆಂಗಳೂರು ಇದರಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸರ್ಕಾರವು ಸತ್ಯಾಸತ್ಯತೆ ತಿಳಿಯಲು ಮತ್ತು ಅದಕ್ಕೆ ಜವಾಬ್ದಾರಿ ನಿಗದಿಪಡಿಸಲು ಸಹಕಾರ ಸಂಘಗಳ ಕಾಯ್ದೆ, ಕಲಂ 64ರಡಿಯಲ್ಲಿ ವಿಚಾರಣೆ ನಡೆಸಲು ಸಹಕಾರ ಸಂಘಗಳ ನಿಬಂಧಕರಿಗೆ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ), ಇವರು ಆದೇಶ ಸಂ. ಡಿಎವೈ-1: 123: ಜೆಎಂಸಿ: 2000-2001, ದಿನಾಂಕ 31-7-2001ರಲ್ಲಿ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 64ರಡಿ ವಿಚಾರಣೆಗೆ ಆದೇಶ ಹೊರಡಿಸಿ ಸಹಕಾರ ಸಂಘಗಳ ನಿಬಂಧಕರ ಪತ್ರಾಂಕಿತ ಸಹಾಯಕರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿರುತ್ತಾರೆ. ವಿಚಾರಣಾ ವರದಿಯು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

1.20 ಪಿಎಂ

+ ಶ್ರೀ ಎ.ಮಂಜು (ಅರಕಲಗೂಡು): ಅಧ್ಯಕ್ಷರೇ, ಈ ಸದನ ಶುರುವಾದಾಗಿನಿಂದ ಈ ಸಮಸ್ಯೆಯ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಹನುಮೇಗೌಡರು ಹಾಗೂ ನಾವೆಲ್ಲಾ ಮಾತನಾಡುತ್ತಿದ್ದೇವೆ. ಸರ್ಕಾರದ ಉತ್ತರವನ್ನು ನೋಡಿದರೆ ಮಂತ್ರಿಯಾಗಿ ಮಾಡಬೇಕಾದ ಕರ್ತವ್ಯವನ್ನು ಅವರು ಮಾಡಿದ್ದಾರೆ. ಈ ಸದನದಲ್ಲಿ, ಇಡೀ ರಾಜ್ಯದಲ್ಲಿ ಗೊತ್ತಾಗಿದೆ. ಕೆಎಂಎಫ್ ಹಗರಣಗಳು ಸಚಿವರ ಗಮನದಲ್ಲಿವೆ. ಕೆಎಂಎಫ್ ರಾಜ್ಯದಲ್ಲಿ ಒಂದು ಒಳ್ಳೆಯ ಸಂಸ್ಥೆ ಕೂಡ ಆಗಿದೆ. ಕೆಲವರ ಸ್ವಾರ್ಥಕ್ಕೋಸ್ಕರ ಈ ಸಂಸ್ಥೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಬಹುಶಃ ಎನ್‌ಕ್ವೈರಿಯಲ್ಲಿ ತನಿಖೆಗಳನ್ನು ಲೆಕ್ಕಾಧಿಕಾರಿಗಳು ಈಗಾಗಲೇ ಮಾಡಿದ್ದಾರೆ, ಮಾಡಿದ್ದರೂ ಕೂಡ ಮಂತ್ರಿಗಳ ಗಮನದಲ್ಲಿದ್ದರೂ ಕೂಡ ಬಹುಶಃ ಈಗ ಕೊಟ್ಟರತಕ್ಕ ಈ ಉತ್ತರವನ್ನು ಮಂತ್ರಿಯಾಗಿ ಕೊಟ್ಟಿದ್ದಾರೆ. ರಾಜಕಾರಣದಲ್ಲಿ ಅಧಿಕಾರ ಬರುವುದು ಆಕಸ್ಮಿಕ. ಅಂಥ ಅವಕಾಶ ಸಹಕಾರ ಮಂತ್ರಿಗಳದ್ದು. ಅವರು ಬಹಳ ಆಸೆ ಆಕಾಂಕ್ಷೆಗಳನ್ನಿಟ್ಟುಕೊಂಡು ರಾಜಕಾರಣ

ಮಾಡುತ್ತಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್: ಅಧ್ಯಕ್ಷರೇ, ಆಕಸ್ಮಿಕವಾಗೇನೂ ಬಂದಿಲ್ಲ, ಕಷ್ಟಪಟ್ಟೇ ಬಂದಿದ್ದೇನೆ.

ಶ್ರೀ ಎ.ಮಂಜು: ಇಂತಹ ಅವಕಾಶ ಸಿಕ್ಕಿದಾಗ ಯಾರು ತಪ್ಪು ಮಾಡಿರುತ್ತಾರೆ ಅವರಿಗೆ ಶಿಕ್ಷೆ ಮಾಡಬೇಕಾಗುತ್ತದೆ. ಅಂಥ ಶಿಕ್ಷೆ ನೀವು ನೀಡುತ್ತಿಲ್ಲ. ಯಾವುದೋ ಹಂತದಲ್ಲಿ ಅದಕ್ಕೆ ರಕ್ಷಣೆ ಆಗುತ್ತಿದೆ ಇವತ್ತು ಉದಾಹರಣೆಗೆ ಮೆಗಾಡೈರಿ ಎಂದು ಈ ಸಂಸ್ಥೆಯವರು ಶುರು ಮಾಡಿದರು. 38 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದ್ದ ಸಂದರ್ಭ, ಅದರಿಂದ ಕ್ವಾರ್ಟರ್ಸ್ ಗೋಡೌನ್ಸ್ ಇವುಗಳ ಮೇಲೆ ಖರ್ಚು ಮಾಡಬೇಕಾಗಿತ್ತು. ಯಾವನೇ ಕಂಟ್ರಾಕ್ಟರ್ ಕ್ವಾರ್ಟರ್ಸ್ ಕಟ್ಟಬೇಕಾದರೆ ಒಂದು ಚದರಡಿಗೆ 82,000 ರೂಪಾಯಿ ಬೇಕಾಗಿಲ್ಲ. 79 ಸಾವಿರ ರೂ.ನಲ್ಲಿ ಶೀಟ್‌ನಲ್ಲಿ ಕಟ್ಟಬೇಕಾಗಿದ್ದ ಗೋಡೌನ್ ಅನ್ನು.....

ಶ್ರೀ ಬಿ.ಎನ್.ಬಚ್ಚೇಗೌಡ: ಗಮನಸೆಳೆಯುವ ಸೂಚನೆಯಡಿ ಬಹಳ ಸ್ಪಷ್ಟವಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ರಿಜಿಸ್ಟ್ರಾರ್‌ರನ್ನು ನೇಮಿಸಿದ್ದೇನೆ, ತನಿಖೆ ಮಾಡಿ ವರದಿ ಕೊಡುತ್ತಾರೆ ಎಂದಿದ್ದಾರೆ. ಆದರೆ ಸದಸ್ಯರು ಎಲ್ಲಾ ವಿಚಾರವನ್ನೂ ಚರ್ಚೆ ಮಾಡುತ್ತಿದ್ದಾರೆ.

ಶ್ರೀ ಎ.ಮಂಜು: ನನಗೆ ಮಾತನಾಡಲು ಅವಕಾಶ ಕೊಡಬೇಕು. ಯಾರೂ ಈ ಸದನದಲ್ಲಿ ಹಿತಾಸಕ್ತಿ ಕಾಪಾಡಲು ಮಾತನಾಡಬಾರದು. ಇದು ನನ್ನ ಹಕ್ಕು.....

(ಗೊಂದಲ)

ಉಪಾಧ್ಯಕ್ಷರು: ಹೀಗೆ ಎಲ್ಲರೂ ಮಾತನಾಡಿದರೆ ಏನರ್ಥವಾಗುತ್ತದೆ? ಸಚಿವರು ಏನು ಹೇಳಿದರು, ಇದು ವಿಚಾರಣೆ ಹಂತದಲ್ಲಿದೆ, ವಿವರವಾದ ವರದಿ ಬಂದ ಮೇಲೆ ನಿಮಗೆ ತಿಳಿಸಲಾಗುವುದು ಎಂದು ಹೇಳಿದ್ದಾರೆ. ಅದಕ್ಕೆ ಮೊದಲು ನೀವೇ ಹೀಗೆ ಮಾತನಾಡಿದರೆ ಹೇಗೆ? ನಿಮಗೆ ಏನಾದರೂ ಅನುಮಾನವಿದ್ದರೆ ಒಂದೂ ವರಡು ಅಂಶ ಕೇಳಬಹುದು. ನೀವು ಭಾಷಣ ಮಾಡುವುದಲ್ಲ.

ಶ್ರೀ ಎ.ಮಂಜು: ಅದು ನನಗೆ ಗೊತ್ತಿದೆ. ನಾನು ಯಾವ ವ್ಯಕ್ತಿಯ ಮೇಲೂ ಆಪಾದಿಸುತ್ತಿಲ್ಲ. ನಾನು ಮಾತನಾಡುತ್ತಿರುವುದು, ಸರ್ಕಾರ ಯಾವುದೋ ಹಂತದಲ್ಲಿ ವಿಫಲವಾಗಿದ. ಇವರು ಸಹಕಾರ ಸಂಘಗಳ ಕಾಯಿದೆ ಕಲಂ 64ರ ತನಿಖೆ ಎಂದು ಹೇಳಿದ್ದಾರೆ. ವಿಚಾರಣೆ ಮಾಡಲು ಎಷ್ಟು ವರ್ಷ ಬೇಕು?

ಶ್ರೀ ಕೆ.ಎಂ.ಕೃಷ್ಣಮೂರ್ತಿ: 1975ರಿಂದ ಮಾಡಲಿ ಸ್ವಾಮಿ 1995-96ರಿಂದ ಏಕೆ?

(ಗೊಂದಲ)

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಬರೀ ಕ್ಲಾರಿಫಿಕೇಷನ್ ಕೇಳಲಾಗಿದೆಯೇ? ಚರ್ಚೆಗೂ ಅವಕಾಶ ಕೊಟ್ಟಿದ್ದೀರಿ. ರೂಲ್ ಪ್ರಕಾರವೇ ಮಾತನಾಡಬೇಕೆಂದು ತಾವೇನು ಹೇಳುತ್ತಿದ್ದೀರಿ ಇದು ಎಲ್ಲದಕ್ಕೂ ಅಡಾಪ್ಟ್ ಆಗಬೇಕಲ್ಲಾ. ಶೂನ್ಯ ವೇಳೆಯಲ್ಲಿ ಚರ್ಚೆಯಾಗುತ್ತದೆ. ಕಾಲಿಂಗ್ ಅಟೆನ್‌ಷನ್‌ನಲ್ಲಿ ಚರ್ಚೆಯಾಗುತ್ತದೆ. ಈ ಸಬ್ಜೆಕ್ಟ್ ಮೇಲೆ ಸಚಿವರು ಹೇಳಿದ್ದಾರೆ: ತನಿಖೆಗೆ ಹೇಳಿದ್ದೇವೆ, ತನಿಖೆಯಾಗುತ್ತದೆ, ವರದಿ ಬರಲಿ ಎಂದು. ಆದರೆ ಯಾವಾಗ ತನಿಖೆ ಮಾಡುತ್ತೀರಿ? ಉತ್ತರ ಯಾವಾಗ ಬರುತ್ತದೆ? ಅವ್ಯವಹಾರವಾಗಿದ್ದರೆ, ಈಚೆಗೆ ಬರಲಿ, ಎರಡೂ ಕ್ಲಿಯರ್ ಆಗಬೇಕು. ಅವ್ಯವಹಾರ ಆಗಿದ್ದರೆ ಅವ್ಯವಹಾರ ಎನ್ನುವುದು ಬರಬೇಕೂ, ಇಲ್ಲ, ಅವರು ಕ್ಲಿಯರ್ ಆಗಿದ್ದರೆ, ಅದೂ ಬರಬೇಕು. ಒಂದು ವಿಚಾರದಲ್ಲಿ ನೀವು ಗಂಟೆಗಟ್ಟಲೆ ಚರ್ಚೆ ಮಾಡಿ ಇನ್ನೊಂದು ವಿಚಾರ ಬಂದಾಗ ಕಾನೂನು ಎಂದು ಹೇಳುವುದು ಸರಿಯಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಶ್ರೀ ಶಿವಪ್ಪನವರಿಗೆ ನಿಯಮ 73ರಡಿ ಗಮನ ಸೆಳೆಯುವ ವಿಧಾನದ ಬಗ್ಗೆ ಗೊತ್ತಿದೆ. ಸಚಿವರು ಉತ್ತರ ಕೊಟ್ಟ ಮೇಲೆ ಸ್ಪಷ್ಟೀಕರಣ ಕೇಳಬಹುದು. ''ರಿಜಿಸ್ಟ್ರಾರಿಂದ ತನಿಖೆಗೆ ಒಳಪಡಿಸಿದ್ದೇವೆ, ವರದಿ ಬಂದ ಮೇಲೆ ಸಭೆಯಲ್ಲಿ ನಾನು ಮಂಡಿಸುತ್ತೇವೆ'', ಎಂದು ಸಚಿವರು ಉತ್ತರಿಸಿದ್ದಾರೆ. ಅದರ ಬಗ್ಗೆ ಸ್ಪಷ್ಟೀಕರಣ ಕೇಳಬೇಕು. ಅದು ಬಿಟ್ಟು ಹಗರಣವಾಗಿದೆ ಎಂದು ಮಾನ್ಯ ಸದಸ್ಯರು ಇನ್‌ಡಿಟೇಲ್ ಆಗಿ ಚರ್ಚೆಗೆ ಹೊರಟಿದ್ದಕ್ಕೆ ನಾನು ತಮ್ಮ ಗಮನ ಸೆಳೆದೆ ಸ್ವಾಮಿ.

ಉಪಾಧ್ಯಕ್ಷರು: ಹೀಗೆ ಪ್ರತಿಯೊಬ್ಬರೂ ಮಾತನಾಡುತ್ತಾ ಹೋದರೆ ಯಾವುದೂ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಸದನ ಆರ್ಡರ್‌ನಲ್ಲಿ ಇಲ್ಲದೇ ಹೋದರೆ ಯಾರು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ. ಈ ಗಮನ ಸೆಳೆಯುವ ಸೂಚನೆಗೆ ಯಾರ್ಯಾರು ಸೂಚನೆ ಕೊಟ್ಟಿದ್ದಾರೋ ಅವರು ಮಾತ್ರ ಮಾತನಾಡಿ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ ಸಾರ್. ನಿಯಮ 73ರಡಿ ಕಾಲಿಂಗ್ ಅಟೆನ್‌ಷನ್ ಎತ್ತಿದ್ದಾರೆ. ಎರಡು ವಿಚಾರದ ಮೇಲೆ ತಮ್ಮ ರೂಲಿಂಗ್ ಬೇಕಾಗಿದೆ. ಒಂದು, ಒಂದೇ ವಿಷಯ ಒಂದು ಅಧಿವೇಶನದಲ್ಲಿ ಎಷ್ಟು ಸಾರಿ ಚರ್ಚೆಯಾಗಬಹುದು ಎಂದು. ಕಳೆದ ವಾರ ಈ ವಿಷಯ ಚರ್ಚೆಯಾಯಿತು.

ಇನ್ನು ಮುಂದುವರೆದ ಅಧಿವೇಶನ. ಬಜೆಟ್ ಅಧಿವೇಶನದಲ್ಲಿ ಈ ವಿಷಯ ಚರ್ಚೆಯಾಗಿತ್ತು. ಮತ್ತೆ ಈಗ ಚರ್ಚೆಯಾಗುತ್ತಿದೆ, ಒಂದೇ ವಿಷಯವನ್ನು ಒಂದೇ ಅಧಿವೇಶನದಲ್ಲಿ ಎಷ್ಟು ಭಾರಿ ಚರ್ಚೆ ಮಾಡಬಹುದೆಂಬುದರ ಬಗ್ಗೆ ತಾವು ರೂಲಿಂಗ್ ಕೊಡಬೇಕು. ಎರಡನೆಯದಾಗಿ, ಒಬ್ಬರಿಗಿಂತ ಹೆಚ್ಚು ಸದಸ್ಯರು ಸೂಚನೆಗೆ ಸಹಿ ಮಾಡಿದಲ್ಲಿ ಮೊದಲು ಸಹಿ ಮಾಡಿದವರು ಮಾತ್ರ ಸ್ಪಷ್ಟೀಕರಣ ಕೇಳಲು ನಿಯಮದಲ್ಲಿ ಅವಕಾಶವಿದೆ, ಸಾಮಾನ್ಯವಾಗಿ ನಾವು ಅನುಸರಿಸಿಕೊಂಡು ಬಂದಿರುವ ನಿಯಮದ ಪ್ರಕಾರ ಇಬ್ಬರು ಮೂರು ಸದಸ್ಯರು ಸ್ಪಷ್ಟೀಕರಣ ಕೇಳುವುದು ಸದನದಲ್ಲಿ ನಡೆದುಕೊಂಡು ಬಂದಿದೆ, ಭಾಷಣ ಮಾಡುತ್ತಾ ಹೋಗುವುದಾದರೆ ಅದು ನಿಯಮದ ವಿರುದ್ಧವಾಗುತ್ತದೆ. ಆ ಬಗ್ಗೆಯೂ ತಾವು ರೂಲಿಂಗ್ ಕೊಡಬೇಕಾಗುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ: ಹಾಸನ ಹಾಲಿನ ಒಕ್ಕೂಟ ಹಾಗೂ ಕೆಎಂಎಫ್ ಇವೆರಡಕ್ಕೂ ಕೂಡ ಒಬ್ಬರೇ ಅಧ್ಯಕ್ಷರಾಗಿದ್ದಾರೆ, ಮೊನ್ನೆ ಬೇರೆ ಸಂಸ್ಥೆಯ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಇವತ್ತು ಬೇರೆ ಸಂಸ್ಥೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ಎರಡು ಸಂಸ್ಥೆಗಳಿಗೂ ಒಬ್ಬರೇ ಅಧ್ಯಕ್ಷರಾಗಿದ್ದಾರೆ. ಅದರಲ್ಲಿ ಕನ್‌ಫ್ಲೂಷನ್ ಇದೆ.

(ಗೊಂದಲ)

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, 1974ರಿಂದ ಏನೇನು ಅವ್ಯವಹಾರಗಳು ನಡೆದಿವೆಯೋ ಆ ಬಗ್ಗೆ ಸಿಓಡಿ ಅಥವಾ ಸಿಬಿಐ ತನಿಖೆಯನ್ನಾದರೂ ಮಾಡಲಿ.

ಉಪಾಧ್ಯಕ್ಷರು: ಮೊನ್ನೆ ಮಾನ್ಯ ಸದಸ್ಯರಾದ ಹನುಮೇಗೌಡರು ವಿಶೇಷವಾಗಿ ಹಾಸನ ಹಾಲಿನ ಒಕ್ಕೂಟದ ಬಗ್ಗೆ ಗಮನವನ್ನು ಸೆಳೆದಿದ್ದರು, ಈಗ ಕೆಎಂಎಫ್ ಬಗ್ಗೆ ಹಲವಾರು ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದಾರೆ. ಅವರು ಮಾತನಾಡಲಿ, ಬೇರೆಯವರು ಮಧ್ಯಪ್ರವೇಶಿಸಿ ಮಾತನಾಡಿದರೆ ಗಮನ ಸೆಳೆಯುವ ಸೂಚನೆಯಾಗುವುದಿಲ್ಲ. ಅದು ಚರ್ಚೆಯಾಗುತ್ತದೆ. ಯಾವ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂಬ ಬಗ್ಗೆ ಸಹಕಾರ ಮಂತ್ರಿಗಳು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ, ಮತ್ತೆ ಕಾಲಮಿತಿಯ ಬಗ್ಗೆ ಸ್ಪಷ್ಟೀಕರಣ ಕೇಳಿ, ಪುನಃ ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ.

ಶ್ರೀ ಎ.ಮಂಜು: ನಾವು ಇವತ್ತು ಈ ವಿಷಯದ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ತಂದು ಮಾತನಾಡುತ್ತಿದ್ದೇವೆ, ಮಂತ್ರಿಗಳು ಸಹಕಾರ ಸಂಘಗಳ ಕಾಯ್ದೆ ಕಲಂ 64ರ ತನಿಖೆ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ, ಅವರಿಗೆ ಧನ್ಯವಾದಗಳು. ಆದರೆ 1988ರಲ್ಲಿ ಮೆಗಾ ಡೈರಿಯನ್ನು ಕಟ್ಟುವುದಕ್ಕೆ ಒಂದು ಟೆಂಡರ್ ಕರೆಯುತ್ತಾರೆ. ಆ ಟೆಂಡರ್‌ಗೆ ಕೊಟೇಷನ್ ಯಾರು ಹಾಕದಿದ್ದರೂ, ಮೂರು ಕೊಟೇಷನ್ ಅನ್ನು ಸ್ವತಃ ಅವರೇ ಕರೆದುಕೊಂಡು ಬಂದು ಸ್ವತಃ ಅವರೇ ಕೊಟ್ಟಿದ್ದಾರೆ ಇದನ್ನು ಮಂತ್ರಿಗಳ ಗಮನಕ್ಕೆ

ತರುವುದಕ್ಕೆ ಇಚ್ಛಿಸುತ್ತೇನೆ. ಇಲ್ಲಿರುವ ವಿವಿಧ ಪಕ್ಷದ ಸದಸ್ಯರು ಪಕ್ಷದ ಪರ ವಹಿಸಿಕೊಂಡು ಮಾತನಾಡಬೇಡಿ, ಇಲ್ಲಿ ಆಗಿರುವ ಅನ್ಯಾಯದ ಬಗ್ಗೆ ಹೇಳುತ್ತಿದ್ದೇವೆಯೇ ಹೊರತು ಮತ್ತೆ ವೈಯಕ್ತಿಕವಾಗಿ ಬೇರೆ ಏನೂ ಉದ್ದೇಶವಿಲ್ಲ. ಸರ್ಕಾರವನ್ನು ಕೇಳುವುದಕ್ಕೆ ನನಗೆ ಹಕ್ಕಿದೆ ಕೇಳುತ್ತಿದ್ದೇನೆ, ನೀವೂ ಕೂಡ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟು ಅಧ್ಯಕ್ಷರ ಅನುಮತಿ ಪಡೆದು 1974ರಿಂದಲ್ಲ ಆ ಸಂಸ್ಥೆ ಹುಟ್ಟಿದಾಗಿನಿಂದಲೂ ತನಿಖೆಯಾಗಲೆಂದು ತಾವು ಕೇಳಿ ನಾವೇನೂ ಬೇಡವೆಂದು ಹೇಳುವುದಿಲ್ಲ.....

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕಲಂ 64ರ ಪ್ರಕಾರ 1974 ರಿಂದಲೇ ಎನ್‌ಕ್ವೈರಿಯನ್ನು ಸರ್ಕಾರ ಮಾಡಲಿ. ಸರ್ಕಾರದಿಂದಾಗದಿದ್ದರೆ ಬೇಕಾದರೆ ಸಿಬಿಐಗೆ ಈ ಪ್ರಕರಣವನ್ನು ವಹಿಸಲಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನೀವು ತಮಗೆ ಇಷ್ಟಬಂದಂತೆ ಮಾತನಾಡುವುದಾದರೆ ಅದು ಕಡತಕ್ಕೆ ಹೋಗುವುದಿಲ್ಲ, ಸಂಬಂಧಿಸಿದವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ನಿಮಗೆ ಅವಕಾಶ ಸಿಕ್ಕಾಗ ನೀವು ಏನು ಹೇಳಬೇಕೆಂದಿರುವಿರೊ ಆಗ ಹೇಳಿ.

ಶ್ರೀ ಎ.ಮಂಜು: ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆಯಿಂದ ಒಂದು ಪೌಚ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುತ್ತಾರೆ, ಅದಕ್ಕೆ ಎಲ್ಲಾ ಮಿಲ್ಕ್ ಯೂನಿಯನ್ ಹಣವನ್ನು ಸಂಗ್ರಹ ಮಾಡಿ ಹಾಕುತ್ತಾರೆ. 6 ಪೌಚ್ ಫಾಕ್ಟರಿಯನ್ನು ಒಂದು ವರ್ಷದೊಳಗೆ ಪ್ರಾರಂಭ ಮಾಡಬೇಕು. ಆದರೆ ಅದು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ಇವರು ಅದನ್ನು ಗುಜರಾತ್‌ನ ಒಂದು ಕಂಪನಿಗೆ ಮಾರಾಟ ಮಾಡುತ್ತಾರೆ, ಈ ಫ್ಯಾಕ್ಟರಿಯನ್ನು ತೆಗೆದುಕೊಂಡ ಸಂಸ್ಥೆಯವರು ಎರಡು ವರ್ಷದಲ್ಲಿ ನಷ್ಟವನ್ನು ಅನುಭವಿಸಿದಾಗ ಈ ಕೆಎಂಎಫ್‌ನವರು ಒಂದೂವರೆ ಕೋಟಿ ರೂಪಾಯಿ ಸಾಲವನ್ನು ತೀರಿಸುವ ವ್ಯವಸ್ಥೆಯನ್ನು ಮಾಡುತ್ತಾರೆ, ಅಂದರೆ ಇದರ ಅರ್ಥ ಯಾರೋ ಮಾಡಿದ ಪಾಪಕ್ಕೆ ನಮ್ಮ ಸರ್ಕಾರ ಹೊಣೆ ಅಥವಾ ನಮ್ಮ ಕೆಎಂಎಫ್ ಹೊಣೆಯಾದಂತಾಗಿದೆ. ಸರ್ಕಾರ ಕೆಎಂಎಫ್‌ಗೆ ಅಂದರೆ ಎಸ್.ಎಸ್.ಎಸ್.ಟಿ ಗೆ ಹಣವನ್ನು ಕೊಡುತ್ತಾರೆ.....

ಶ್ರೀ ಬಿ.ಎನ್.ಬಚ್ಚೇಗೌಡ: ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ತರಹ ಅವರಿಗೆ ಗೊತ್ತಿರುವ ಹಾಗೆ ಎಲ್ಲ ಹೇಳುತ್ತಾ ಹೋದರೆ ಅದು ಸರಿಯಲ್ಲ. Item wise he is going in detail. This amounts to subjudice.....

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಗೊಂದಲದಲ್ಲಿ ಮಾತನಾಡುವುದು ಯಾವುದೂ

ಸಹಿತ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಚನ್ನಿಗಪ್ಪನವರೇ, ತಾವು ಏನು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎ.ಮಂಜು: ಕೆಎಂಎಫ್‌ಗೆ ಎಸ್‌ಸಿ:ಎಸ್‌ಟಿ ಹಣವನ್ನು ಸರ್ಕಾರ ಕೊಟ್ಟರೆ ಅದನ್ನು ಬ್ಯಾಂಕ್‌ನಲ್ಲಿಟ್ಟುಕೊಂಡು ಆ ಬಡ್ಡಿಯ ಹಣವನ್ನು ಕೆಎಂಎಫ್ ಪ್ರಾಫಿಟ್ ಆಗಿದೆ ಎಂದು ತೋರಿಸುತ್ತಾರೆ, ಇವರಿಗೆ ಎಸ್‌ಸಿ:ಎಸ್‌ಟಿ ಜನರ ಮತಬೇಕು, ಅವರ ಮನವೊಲಿಸಬೇಕು ಅವರ ಪರವಾಗಿ ಮಾಡುತ್ತಿರುವ ಕೆಲಸ ಇದು. ಅಂದರೆ ಇವರು ಎಸ್‌ಸಿ:ಎಸ್‌ಟಿಗಳಿಗೂ ಮೋಸ ಮಾಡಿ ಬ್ಯಾಂಕ್‌ನಲ್ಲಿ ಅವರಿಗೆಂದು ಕೊಟ್ಟ ಹಣವನ್ನು ಇಟ್ಟುಕೊಂಡು ಅದರಿಂದ ಬಂದ ಬಡ್ಡಿ ಹಣವನ್ನು ಕೆಎಂಎಫ್‌ಗೆ ಲಾಭವಾಗಿದೆ ಎಂದು ಹೇಳುವುದು ಸರಿ ಇದೆಯೇ.....

ಉಪಾಧ್ಯಕ್ಷರು: ನಾನು ಮಾನ್ಯ ಸದಸ್ಯರುಗಳಲ್ಲಿ ಏನಂತಿಸಿಕೊಳ್ಳುವುದೇನೆಂದರೆ, ಯಾರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೋ ಅವರಿಗೆ ಮಾತನಾಡಲು ಇತರ ಸದಸ್ಯರು ಅವಕಾಶ ಮಾಡಿಕೊಡಬೇಕು. ಅವರು ಮಾತನಾಡುವಾಗ ಮಧ್ಯೆ ಅಡಚಣೆಯುಂಟು ಮಾಡಬಾರದು.

ಶ್ರೀ ಎ.ಮಂಜು: ನಾನು ಮಾನ್ಯ ಸದಸ್ಯರಾದ *** ಅದುದರಿಂದ, ಮಾತನಾಡಲು ಹೋಗಬೇಡಿ.

ಶ್ರೀ ಸಿ.ಚನ್ನಿಗಪ್ಪ: ನಾವು ಪ್ರಾಮಾಣಿಕರಿದ್ದೇವೆ, ದಯಮಾಡಿ ಮಾನ್ಯ ಸದಸ್ಯರು ತಾವು ಆಡಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅಲ್ಲಿ ಭ್ರಷ್ಟಾಚಾರ ನಡೆದಿದ್ದರೆ ಸಿ.ಬಿ.ಐ. ತನಿಖೆಯಾಗಲಿ. ನಾವು ಆ ಪ್ರಕರಣದಲ್ಲಿ ಶಾಮೀಲಾಗಿರುವುದನ್ನು ಮಾನ್ಯ ಸದಸ್ಯರಾದ ಮಂಜುರವರು ಸಾಬೀತುಪಡಿಸಿ ತೋರಿಸಲಿ.

ಶ್ರೀ ಸಿ.ಎಂ.ಲಿಂಗಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಿ, ನಾವೂ ಸಹ ಮಾತನಾಡುವವರಿದ್ದೇವೆ. ಅವರು ಮಾತನಾಡುವಾಗ ನಾವು ಯಾವತ್ತಾದರೂ ಅಡ್ಡಿಪಡಿಸಿದ್ದೇವೆಯೇ? ರಾಜ್ಯ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಮಟ್ಟದ ಸಂಸ್ಥೆಯಲ್ಲಾಗಿರುವ ಅವ್ಯವಹಾರಗಳ ಕುರಿತು ಇವೊತ್ತು ಸದನದ ಗಮನಕ್ಕೆ ತರುವ ಪ್ರಯತ್ನವಾಗುತ್ತಿದೆ. ಇವರುಗಳೆಲ್ಲಾ ಏಕೆ ಈ ರೀತಿ ಅಡ್ಡಿಪಡಿಸುತ್ತಿದ್ದಾರೆ? ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಸಿ.ಚನ್ನಿಗಪ್ಪ: ನಮ್ಮ ಪಕ್ಷದವರು ಯಾರೂ ಮಾತನಾಡುವುದಿಲ್ಲ. ಸರ್ಕಾರದ

*** ಈ ಪದಗಳನ್ನು ಅಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಈ ಕುರಿತು ಸಿ.ಬಿ.ಐ. ತನಿಖೆಯಾಗಲೀ ಇಲ್ಲವೇ ಮತ್ತಾವುದೇ ತನಿಖೆಯಾಗಲೀ ಎದುರಿಸಲು ಸಿದ್ಧರಿದ್ದೇವೆ. ಆದರೆ, ಒಬ್ಬ ವ್ಯಕ್ತಿಯ ಮೇಲೆ ಆಪಾದನೆ ಮಾಡುವ ಉದ್ದೇಶವಿಟ್ಟುಕೊಂಡಿರುವುದು ಅನ್ಯಾಯದ ಪರಮಾವಧಿ, ಅಕ್ಷಮ್ಯವಾಗಿದೆ. 1974ರಿಂದಲೇ ಈ ಕುರಿತು ತನಿಖೆ ನಡೆಸಲಿ. ನಾವು ತಪ್ಪಸಗಿದ್ದರೆ ರಾಜೀನಾಮೆ ಕೊಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಮಾತನಾಡುತ್ತಿರಬೇಕಾದರೆ ನೀವು (ಚನ್ನಿಗಪ್ಪ) ಪದೇ ಪದೇ ಅಡ್ಡಿಪಡಿಸಬಾರದು. ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಎ.ಮಂಜು: ಮಾನ್ಯ ಉಪಾಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ವರ್ಗದವರ ಏಳಿಗೆಗೆ ಮೀಸಲಾಗಿಟ್ಟ ಹಣವನ್ನು ಯಾವ ರೀತಿ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಿದೆ. ಸರ್ಕಾರ ಕೆ.ಎಂ.ಎಫ್.ಗೆ ಅನುದಾನದ ಹಣ ಕೊಡುತ್ತದೆ. ಆದರೆ, ಸರ್ಕಾರದಿಂದ ಳಳುಹಿಸುವ ಸಾಮಿನೇಷನ್ ಅನ್ನು ಅವರು ತಿರಸ್ಕರಿಸುತ್ತಾರೆ! ಅಂದರೆ, ಕೆ.ಎಂ.ಎಫ್.ನವರು ಸರ್ಕಾರಕ್ಕೆ ಎಷ್ಟು ಗೌರವ ಕೊಟ್ಟಿದ್ದಾರೆಂಬುದು ಇದರಿಂದ ವೇದ್ಯವಾಗುತ್ತದೆ. ಇದೆಲ್ಲವನ್ನೂ ನಾನು ಹೇಳುತ್ತಿರುವಾಗ ಮಾನ್ಯ ಸದಸ್ಯರಾದ ಚನ್ನಿಗಪ್ಪನವರು ಸಮಾಧಾನಚಿತ್ತದಿಂದ ಕೇಳಿದರೆ ಅವರೂ ಕೂಡ ನನ್ನ ಬೆಂಬಲಕ್ಕೆ ಬರುತ್ತಾರೆಂದು ಭಾವಿಸಿದ್ದೇನೆ. ನಾನು ಹೇಳುವುದನ್ನು ತಾವು ಸಹನೆಯಿಂದ ಕೇಳಬೇಕು. ಅನಂತರ, ಸಂಸ್ಥೆಯ ಒಬ್ಬ ಅಧ್ಯಕ್ಷರು ವಿದೇಶಕ್ಕೆ ತೆರಳುತ್ತಾರೆ. ಇದಕ್ಕಾಗಿ ನಲವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಸ್ರೇಲ್ ಮತ್ತು ಸ್ವಿಟ್ಜರ್ಲೆಂಡ್‌ಗೆ ಪ್ರವಾಸ ಹೋಗಿ ಬಂದಿದ್ದು, ಪ್ರವಾಸ ಕೈಗೊಂಡ ಉದ್ದೇಶ ಕುರಿತಂತೆ ಇದುವರೆಗೂ ಸರ್ಕಾರಕ್ಕೆ ವರದಿ ಸಲ್ಲಿಸಿಲ್ಲ. ವರದಿ ಏಕೆ ಸಲ್ಲಿಸಬಾರದು? ಇದನ್ನು ನಾವು ಕೇಳುವುದು ತಪ್ಪೆಂದು ಮಾನ್ಯ ಸದಸ್ಯರಾದ ಚನ್ನಿಗಪ್ಪನವರು ಹೇಳಿದರೆ ನಾವು ಮಾತನಾಡುವುದಿಲ್ಲ. ಇಸ್ರೇಲ್‌ಗೆ ಹೋಗಲು ಸರ್ಕಾರದಿಂದ ಅನುಮತಿ ಪಡೆದುಕೊಂಡಿದ್ದು, ಸ್ವಿಟ್ಜರ್ಲೆಂಡ್‌ಗೆ ಹೋಗಲು ಅನುಮತಿ ಪಡೆದಿರುವುದಿಲ್ಲ. ಅಲ್ಲದೆ, ಅಲ್ಲಿಗೆ ಯಾವ ಕಾರಣಕ್ಕಾಗಿ ಪ್ರವಾಸ ಕೈಗೊಂಡರು ಎಂಬ ಬಗ್ಗೆಯೂ ಸರ್ಕಾರಕ್ಕೆ ವರದಿ ಕೊಟ್ಟಿಲ್ಲ. ಆದುದರಿಂದ, ದಯಮಾಡಿ ತನಿಖೆಯಲ್ಲಿ ಇದನ್ನೂ ಸಹ ಸೇರಿಸಿಕೊಳ್ಳಬೇಕು.

ಡಾ: ಭಾರತಿಶಂಕರ್: *** ಹೋಗಿದ್ದರೇ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ದಯಮಾಡಿ ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

*** ಈ ಪದಗಳನ್ನು ಅಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಿ.ಮಂಗಾ: ನಾವು ಯಾರ ಹೆಸರನ್ನೂ ಹೇಳಿಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಹೆಸರು ಹೇಳದಿದ್ದರೂ ***

(ಗೊಂದಲ)

ಶ್ರೀ ವಿ.ಮಂಜು: ಮಾನ್ಯ ಉಪಾಧ್ಯಕ್ಷರೆ, ಕೆ.ಎಂ.ಎಫ್. ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗಲೆಂಬ ಕಾರಣಕ್ಕಾಗಿ ಸರ್ಕಾರ ಕೋರಮಂಗಲದಲ್ಲಿ ಸುಮಾರು ನಾಲ್ಕು ಎಕರೆ ಹದಿನಾಲ್ಕು ಗುಂಟೆಯಷ್ಟು ಜಮೀನು ನೀಡಿದ್ದರೆ, ಅರ್ಧ ಎಕರೆಯನ್ನು ಗುಜರಾತ್ ಕಂಪನಿ (ಜಿ.ಸಿ.ಎಂ.ಎಫ್) ಯೊಂದಕ್ಕೆ ಇವರು ಮಾರಾಟ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಲಿಲ್ಲ ಹಾಗೂ ಜಮೀನನ್ನು ಮಾರಾಟ ಮಾಡುವುದಕ್ಕೆ ಸರ್ಕಾರದಿಂದ ಅನುಮತಿಯನ್ನೂ ಸಹ ತೆಗೆದುಕೊಂಡಿಲ್ಲ. ಅನುಮತಿ ತೆಗೆದುಕೊಂಡಿದ್ದರೆ ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ನಾನು ವೈಯಕ್ತಿಕವಾಗಿ ಮಾತನಾಡುತ್ತಿದ್ದೇನೆಂಬ ಯಾವ ಮಾನ್ಯ ಸದಸ್ಯರೂ ಕೂಡ ದಯವಿಟ್ಟು ಭಾವಿಸಕೂಡದು. ನೀವೇಕೆ(ಚನ್ನಿಗಪ್ಪ) ಇದರ ಪರ ವಹಿಸಿಕೊಳ್ಳಲು ಹೋಗುತ್ತಿದ್ದೀರಿ? ನಾವು ಹೇಳುತ್ತಿರುವುದು ತಪ್ಪಿದ್ದರೆ ಹೇಳಿ, ತಿದ್ದಿಕೊಳ್ಳುತ್ತೇವೆ. ನಮಗೆ ಮಾತನಾಡಲು ಅವಕಾಶವಿರುವಾಗ ತಾವು ಅಡ್ಡಿಪಡಿಸಿ ಮೊಟಕುಗೊಳಿಸಬಾರದು. ಇನ್ನು ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್‌ನಲ್ಲಿ ಸೆಕ್ಷನ್ 30(ಬಿ) ನಿಯಮವಿದ್ದು, ನಿಯಮಾವಳಿ ಉಲ್ಲಂಘಿಸಿ ನೇಮಕಾತಿ ಮಾಡಿದಲ್ಲಿ ಇದು ತಪ್ಪೆಂದು ಸದರಿ ಸೆಕ್ಷನ್ ಅನ್ವಯ ಆದೇಶವನ್ನು ಹಕ್ಕು ರಿಜಿಸ್ಟ್ರಾರ್ ಅವರಿಗಿರುತ್ತದೆ. ಆದರೆ, ಈ ನಿಯಮಾವಳಿಯನ್ನು ಗಣನೆಗೆ ತಗೆದುಕೊಳ್ಳದೆ ತಮಗಿಷ್ಟವಾದವರಿಗೆ ನೇಮಕಾತಿಯನ್ನು ಸಂಸ್ಥೆಯಲ್ಲಿ ಮಾಡಿರುವುದರ ಕುರಿತು ಪ್ರಶ್ನಿಸುವುದು ತಪ್ಪೆಂದರೆ ಇದರಲ್ಲಿ ಏನಾದರೂ ಅರ್ಥವಿದೆಯೇ? ಸಂಸ್ಥೆಯಲ್ಲಿ ಯಾವ್ಯಾವ ರೀತಿಯ ಅನ್ಯಾಯಗಳನ್ನು ಎಸಗಿದ್ದಾರೆಂಬುದು ಎದ್ದು ಕಾಣಿಸುತ್ತದೆ. ಜೊತೆಗೆ ಅಲ್ಲೊಂದು ಹುಳುಕು ತಯಾರಿಸುವ ಘಟಕವಿದ್ದು, ಗುಜರಾತ್ ಕಂಪನಿಯೊಂದಕ್ಕೆ ಟೆಂಡರ್ ನೀಡಲು ಇವರೇ ತೀರ್ಮಾನಿಸಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಕೃಷ್ಣಮೂರ್ತಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾನು ವೈಯಕ್ತಿಕವಾಗಿ ಯಾರ ಹೆಸರು ಹೇಳುತ್ತಿಲ್ಲ. ಒಂದು ಸಂಸ್ಥೆಯ ಅಧ್ಯಕ್ಷರಾಗಿ ಟೆಂಡರ್ ಇಲ್ಲದೆ ಗುಜರಾತ್ ಕಂಪನಿಗೆ ಕೊಟ್ಟಿರುವುದು ತಪ್ಪು. ಇದನ್ನು ಸರಿಪಡಿಸಬೇಕು. ಜೊತೆಗೆ ಅಲ್ಲಿ ಮಾಡಿರುವಂತಹ ಅನ್ಯಾಯದ ಬಗ್ಗೆ ಕಮರ್ಷಿಯಲ್ ಟ್ಯಾಕ್ಸ್ ರೇಡ್ ಆಯಿತು. ಆ ಕೇಸ್ ಬಗ್ಗೆ ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಏಕೆ ನೋಡಲಿಲ್ಲ? ನಾವು ಕೇಳುತ್ತಿರುವುದು ಏಕೆಂದರೆ ಸರ್ಕಾರ ಮಲಗಿರೆಯೇ

*** ಈ ಪದಗಳನ್ನು ಅಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಎಂದು? ಜೊತೆಗೆ ಸಿವಿಲ್ ವರ್ಕ್ಸ್‌ನಲ್ಲಿ ಆಗಿರತಕ್ಕಂಥ ಅನ್ಯಾಯ. ಮಾನ್ಯ ಚನ್ನಿಗಪ್ಪನವರು ಸ್ವತಃ ಎರಡು ಕೋಟಿ ರೂಪಾಯಿಗಳ ಒಂದು ಮನೆ ಕಟ್ಟಿದ್ದಾರೆ. ಅವರು ಒಂದು ಚದರಕ್ಕೆ ಎಷ್ಟು ಖರ್ಚಾಯಿತು ಎಂದು ಹೇಳಲಿ ನೋಡೋಣ. ನನಗೆ ಗೊತ್ತಿರುವ ಪ್ರಕಾರ ಅವರಿಗೆ ಖರ್ಚಾಗಿರುವಂತಾದ್ದು ಒಂದು ಚದರಡಿಗೆ 45-50 ಸಾವಿರ ರೂ.ಗಳು ಇರಬಹುದು. ಕೆ ಎಂ ಎಫ್ ಕ್ವಾರ್ಟರ್ಸ್ ಕಟ್ಟುವುದಕ್ಕೆ ಒಂದು ಚದರಕ್ಕೆ 85 ಸಾವಿರ ರೂಪಾಯಿ ಖರ್ಚು ಮಾಡಿದ್ದರೆ ನಾವು ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ? ಗೋಡೌನ್ ಕಟ್ಟುವುದಕ್ಕೆ ಒಂದು ಚದರಡಿಗೆ 78 ಸಾವಿರ ರೂಪಾಯಿ ಹಾಕಿದರೆ ನಾವು ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ? ಮಾನ್ಯ ಮಂತ್ರಿಗಳೇ, ನನಗೆ ಇಲ್ಲಿ ಏಕೋ ಅನುಮಾನ ಇದೆ. ಮಾನ್ಯ ಮಂತ್ರಿಗಳು ಭಾರಿ ಉತ್ಸಾಹದಿಂದ ಕೆಲಸ ಮಾಡುತ್ತಿರುವಂತಹವರು. ಜೊತೆಗೆ ದಕ್ಷರು. ಆದರೆ ಇದರಲ್ಲಿ ಏಕೆ ಅವರ ದಕ್ಷತೆ ತೋರಿಸುತ್ತಿಲ್ಲ? ನಾನು ಸರ್ಕಾರವನ್ನು ಕೇಳುತ್ತಾ ಇರತಕ್ಕಂಥಾದ್ದು.....

ಶ್ರೀ ದೊಡ್ಡೇಗೌಡ: ಮಾನ್ಯ ಅಧ್ಯಕ್ಷರೇ, ದೇವರು ತೀರ್ಮಾನ ಕೊಡುತ್ತಿದ್ದಾರೆ. ಈ ತರಹ ಭ್ರಷ್ಟಾಚಾರ ಮಾಡಿದರೆ ಅದನ್ನು ದೇಶಕ್ಕೆ ಹಂಚಬಹುದು. ಚನ್ನಿಗಪ್ಪನವರೇ, ತಾವು ಏಕೆ ಆ ಬಗ್ಗೆ ಮಾತನಾಡುತ್ತೀರಿ? ಮಾನ್ಯ ಚನ್ನಿಗಪ್ಪನವರಿಗೆ ಮತ್ತು ಕೃಷ್ಣಮೂರ್ತಿಯವರಿಗೆ ಏನು ಕಷ್ಟ?

(ಗೊಂದಲ)

ಶ್ರೀ ಎ.ಮಂಜು: ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿಲ್ಲ. ನಾನು ಕೇಳುತ್ತಿರುವುದೇನೆಂದರೆ ಕಲಂ 64ರ ವಿಚಾರಣೆಯನ್ನು ಸರ್ಕಾರ ಏತಕ್ಕೆ ಇನ್ನೂ ಮಾಡಿಲ್ಲ ಕಲಂ 64ರ ವಿಚಾರಣೆಯೇ ಬೇಕಾಗಿಲ್ಲ. ಲೆಕ್ಕಾಧಿಕಾರಿಗಳು ಕೊಟ್ಟಂತಹ ವರದಿ ಮೇಲೆ ಇಷ್ಟು ಹೊತ್ತಿಗೆ ಸೂಪರ್‌ಸೀಡ್ ಮಾಡಬೇಕು. ಬೇರೆ ಸರ್ಕಾರ ಇದ್ದಿದ್ದರೆ ಇಷ್ಟು ಹೊತ್ತಿಗೆ ಸೂಪರ್‌ಸೀಡ್ ಮಾಡಿ ಎಷ್ಟೋ ದಿವಸ ಆಗುತ್ತಿತ್ತು. ಏಕೆ ಆ ಬಗ್ಗೆ ಮಾನ್ಯ ಮಂತ್ರಿಗಳು ಇನ್ನೂ ಚಿಂತೆ ಮಾಡಿಲ್ಲ? ಆ ರೈತರ ಬಗ್ಗೆ ಏಕೆ ಇನ್ನೂ ಯೋಚನೆ ಮಾಡಿಲ್ಲ. ಏತಕ್ಕೆ ಸೂಪರ್‌ಸೀಡ್ ಮಾಡಬಾರದು? ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಇಷ್ಟೇ. ಕಲಂ 64ರ ವಿಚಾರಣೆಯನ್ನು ಹಾಸನಕ್ಕೆ ಮಾಡಿದ್ದಾರಲ್ಲಾ 2 ತಿಂಗಳಾಗಿದೆ 3 ತಿಂಗಳಾಗಿದೆ ಎಂದು ಆ ರೀತಿ ಮಾಡುವುದು ಬೇಡ. ತುರ್ತಾಗಿ ಈ ಬಗ್ಗೆ ಕಲಂ 64ರ ವಿಚಾರಣೆ ಮಾಡಿ ಕೂಡಲೇ ಈಗ ಇರತಕ್ಕಂಥ ಮಾಹಿತಿ ಪ್ರಕಾರ ಸೂಪರ್‌ಸೀಡ್ ಮಾಡಬೇಕು. ಇಲ್ಲದಿದ್ದರೆ ಹೊರಗಡೆ ಜನ ಏನು ಮಾತನಾಡಿಕೊಳ್ಳುತ್ತಿದ್ದಾರೆಂದರೆ ಯಾರೋ ಮಂತ್ರಿಗಳ ಹತ್ತಿರ ಬಂದು ಅತ್ತು ಕರೆದು ಮಾಡಿದ್ದರಿಂದ ಸುಮ್ಮನಾಗಿಬಿಟ್ಟಿದ್ದಾರೋ ಏನೋ ಎನ್ನುವ ಭಾವನೆ ಬಂದಿದೆ. ಅದು ಆಗಬಾರದು. ಯಾರಾದರೂ ಬರಲಿ ಯಾರಾದರೂ ಹೇಳಲಿ ಅದನ್ನು ಲೆಕ್ಕಿಸದೆ ರಾಜ್ಯದ ಹಿತಾಸಕ್ತಿ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಕೂಡಲೇ ಈ ಬಗ್ಗೆ ಆದೇಶ

ಮಾಡಬೇಕು ಆಗ ಮಾತ್ರ ಕೆ ಎಂ ಎಫ್ ಉಳಿಯುವುದಕ್ಕೆ ಸಾಧ್ಯ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎಂ.ರೇವಣ್ಣ (ಮಾಗಡಿ): ಮಾನ್ಯ ಅಧ್ಯಕ್ಷರೇ, ಇವತ್ತು ಕೆ ಎಂ ಎಫ್ ಬಗ್ಗೆ ಚರ್ಚೆ ಆರಂಭವಾಗಿ ಒಂದು ಹಂತದಲ್ಲಿ ಗಮನಸೆಳೆಯುವ ಸೂಚನೆ ಯಾವ ರೀತಿ ಇರಬೇಕು ಎನ್ನುವ ಒಂದು ಹೊಸ ಸಂಪ್ರದಾಯವನ್ನು ಕೇಳುವ ಮಟ್ಟಕ್ಕೆ ಹೋಗಿತ್ತು. ಮಾನ್ಯ ಸದಸ್ಯರಾದ ಮಂಜುರವರು ಅನೇಕ ವಿಚಾರಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಸಹಕಾರ ಕಾಯ್ದೆ ಕಲಂ 64ರ ಅನ್ವಯ ವಿಚಾರಣೆ ಮಾಡತಕ್ಕಂಥಾದ್ದನ್ನು ನಾನು ಸ್ವಾಗತ ಮಾಡಿ ಇದಕ್ಕೆ ಒಂದು ನಿಗದಿತ ಸಮಯವನ್ನು ಗೊತ್ತು ಮಾಡಿ ಅತಿ ಶೀಘ್ರವಾಗಿ ಆಗುವಂತಹ ಕೆಲಸ ಆಗಬೇಕು. ಇವತ್ತು ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಇಲ್ಲದೆ ಫೌಚ್ ಫ್ಯಾಕ್ಟರಿಯನ್ನು 31-3-2000ದಲ್ಲಿ ಪ್ರಾರಂಭ ಮಾಡುತ್ತಾರೆ ಇದಕ್ಕೆ 1,30,87,851-00 ರೂಪಾಯಿಗಳು ಖರ್ಚಾಗುತ್ತದೆ. ಆ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿದ 44 ದಿವಸಗಳಲ್ಲಿ ಬೇರೆಯವರಿಗೆ ವಹಿಸಿಕೊಡುತ್ತಾರೆ. ಮೊದಲು ಪ್ರಾರಂಭ ಮಾಡಿದ್ದು ನಾವೇ ಮಾಡುತ್ತೇವೆಂದು ಹೇಳಿ. ಆದರೆ 44 ದಿವಸಗಳಲ್ಲಿ ಬೇಕಾದವರಿಗೆ ಹಸ್ತಾಂತರ ಮಾಡಿ ಅದರಿಂದ ಬರತಕ್ಕಂಥ ನಷ್ಟವನ್ನು ಅಂದರೆ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಕೆ ಎಂ ಎಫ್ ನಾವು ಭರ್ತಿ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಕೆ.ಬಿ.ಮಲ್ಲಿಕಾರ್ಜುನ್‌ರವರು ಮೊನ್ನೆ ದಿವಸ ಲಂಚದ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಲಂಚವನ್ನು ಗಾಳಿಯಲ್ಲಿ ಹಿಡಿಯೋಣವೇ ಎಂದು ಕೇಳಿದರು. ಇವತ್ತು ಇದನ್ನು ಗಾಳಿಯಲ್ಲಿ ಹಿಡಿಯಬೇಕೋ ಅಥವಾ ಎಲ್ಲಿ ಹಿಡಿಯಬೇಕೋ ಎಂಬುದು ಗೊತ್ತಾಗುತ್ತಿಲ್ಲ. ಇಂತಹ ವಿಷಯವನ್ನು ಅವರು ಮಾತನಾಡುವುದು ಬೇಡ ಎನ್ನುವ ಅರ್ಥದಲ್ಲಿ ಮಾತನಾಡಿದ್ದನ್ನು ನೋಡಿದರೆ ನನಗೆ ನಿಜವಾಗಿಯೂ ನೋವಾಯಿತು. ಈ ಒಂದು ವಿಷಯವನ್ನೂ ಸಹ ಅದರಲ್ಲಿ ಒಳಪಡಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು 3-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 2.00ಕ್ಕೆ ಮುಂದೂಡಲ್ಪಟ್ಟು ಮತ್ತೆ 3-00 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3.20ಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷರ ಪೀಠದಲ್ಲಿ ಸನ್ಮಾನ್ಯ ಉಪಾಧ್ಯಕ್ಷರಾದ ಶ್ರೀ ಮನೋಹರ್ ಹೆಚ್.ತಹಸೀಲ್ದಾರ್ ಉಪಸ್ಥಿತರಿದ್ದರು)

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ ವಿಧಾನ ಪರಿಷತ್ತಿನಿಂದ ಬಂದಿದೆ. ನಂತರ ಗಮನ ಸೆಳೆಯುವ ಸೂಚನೆಯ ಚರ್ಚೆಯನ್ನು ಮುಂದುವರಿಸೋಣ.